ಮಾರುಕಟ್ಟೆಯವರೆಗೆ ಕಲ್ಪಿಸಿದರೆ ಹುಬ್ಬಳ್ಳಿ ಹೊರಗಿನ (ರಿಂಗ್) ರಸ್ತೆ ಅಗತ್ಯವೇ ಎನ್ನುವುದನ್ನು ಸರ್ಕಾರ ಗಮನಿಸಿರುವುದೇ ;

ಇ) ಸದರಿ ಸಂಪರ್ಕ ಹೊರವಲಯದ ಮಾರ್ಗದ ವೆಚ್ಚ ಎಷ್ಟು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಅಂಕೋಲ – ಗುತ್ತಿ ರಸ್ತೆಗೆ ಹುಬ್ಬಳ್ಳಿ ನಗರದ ಹೊರವಲಯ ರಸ್ತೆಯ ನಿರ್ಮಾಣದ ಪ್ರಸ್ತಾವನೆಯು ಸಧ್ಯದಲ್ಲಿ ಇರುವುದಿಲ್ಲ.

ಆ) ಬಿಜಾಪುರ – ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ – 218, ಒಟ್ಟು 192.00 ಕಿಮೀ ಉದ್ದವಿದ್ದು, 28.00 ಕಿಮೀ.ಗಳಲ್ಲಿ 1.36 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳು ಮುಗಿದಿವೆ. 114 ಕಿಮೀ ಉದ್ದದಲ್ಲಿ 39.96 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ಮಾರ್ಚ್ 2004 ವರೆಗೆ phasing ಸೂಚಿಸಿದೆ. ಅದರಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. ಉಳಿದ 50.00 ಕಿಮೀ ಉದ್ದದಲ್ಲಿ ಕಾಮಗಾರಿಗಳನ್ನು ಮುಂಬರುವ ವಾರ್ಷಿಕ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು. ಗಮನಿಸಿದೆ.

ಇ) ರಿಂಗ್ ರಸ್ತೆಯ ನಿರ್ಮಾಣದ ನಿರ್ಧಾರವು ಇತ್ಯರ್ಥವಾದ ನಂತರವೇ ಅಂದಾಜು ವೆಚ್ಚವನ್ನು ನಿರ್ಧರಿಸಬಹುದು.

ಧಾರವಾಡ – ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ ಸುಧಾರಣೆ

4293(5097) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಧಾರವಾಡ – ಹುಬ್ಬಳ್ಳಿ ಮಧ್ಯದ ಮೊದಲಿನ ರಾಷ್ಟ್ರೀಯ ಹೆದ್ದಾರಿ – 4 ಈಗ ಲೋಕೋಪಯೋಗಿ ಇಲಾಖೆಯ ವಶಕ್ಕೆ ಬಂದಿರುವುದು ನಿಜವೇ ;

ಆ) ವಾಹನಗಳ ದಟ್ಟಣೆ ಮತ್ತು ನಗರದ ಬೆಳವಣಿಗೆ ಗಮನಿಸಿ ಮುಖ್ಯ ಮಂತ್ರಿಗಳು ಜೋಡು ಮಾರ್ಗ ಮಾಡಿಸುವ ಭರವಸೆ ನೀಡಿರುವುದು ನಿಜವೇ ; ಹಾಗಿದ್ದಲ್ಲಿ ವಿವರ ನೀಡುವುದು ;

ಇ) ಸದರಿ ಜೋಡು ರಸ್ತೆ ಬೆಂಗಳೂರು ರಾಜಧಾನಿಯ ಅಭಿವೃದ್ಧಿಯಷ್ಟೆ ಮಹತ್ವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ನಿಜವಲ್ಲ.

ಆ) ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 16.8.2002 ರಂದು ಹುಬ್ಬಳ್ಳಿ ತಾಲ್ಲೂಕಿನ ಅಮರಗೋಳದ ಎ.ಪಿ.ಎಂ.ಸಿ. ಆವರಣದಲ್ಲಿ "ರೈತರ ಸಂತೆ" ಕಾರ್ಯಕ್ರಮದ ಅಂಗವಾಗಿ ನಡೆದ ಸಾರ್ವಜನಿಕ ಸಭೆಯಲ್ಲಿ ಜೋಡು ಮಾರ್ಗದ ಭರವಸೆ ನೀಡಿರುವುದು ನಿಜವಾಗಿದೆ.

ಇ) ಇದರ ಮಹತ್ವವನ್ನು ಸರಕಾರವು ತಿಳಿದಿದೆ.

ರಾಜ್ಯದಲ್ಲಿ ಕ್ರೀಡಾ ಬೆಳವಣಿಗೆಗಳಿಗೆ ಅನುಕೂಲತೆಗಳು

4294(5243) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಬೆಂಗಳೂರು ನಂತರದ ಮಹಾನಗರಗಳಲ್ಲಿ ಯಾವ ಕ್ರೀಡಾ ಬೆಳವಣಿಗೆಯ ಸೌಲಭ್ಯಗಳನ್ನು ನೀಡಲಾಗಿದೆ ; (ಮಾಹಿತಿ ಒದಗಿಸುವುದು) ;